**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 02.12.2023
ಪಾಟಿ ಸವಾಲು : 1 ನೇ ಪ್ರತಿವಾದಿ ಪರ

1 ನೇ ಪ್ರತಿವಾದಿ ಹಾಗೂ ಅವರ ವಕೀಲರು ಗೈರು ಹಾಜರಾಗಿದ್ದು ಅವರ ಪರ ಸಾಕ್ಷಿಯ ಪಾಟಿ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಪಾಟಿ ಸವಾಲು : 2,3,7 ಮತ್ತು 9 ನೇ ಪ್ರತಿವಾದಿ ಪರ ಶ್ರೀಮತಿ ಎಲ್.ವಿ. ವಕೀಲರಿಂದ**

ದಾವಾ ಸ್ವತ್ತು ಬೀರೇದೇವರು ದೇವಸ್ಥಾನಕ್ಕೆ ಸೇರಿದೆ ಎಂದು ತೋರಿಸುವ ಸಲುವಾಗಿ ಆರ್.ಟಿ.ಸಿ ಗಳನ್ನು ಹಾಜರುಪಡಿಸಿದ್ದೇನೆ. ದಾವಾ ಸ್ವತ್ತು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಇರುತ್ತದೆ ಎಂದರೆ ಸರಿ. ನಾನು ಪಾಂಡವಪುರ ತಾಲ್ಲೂಕಿನಲ್ಲಿ ವಾಸವಿದ್ದೇನೆ ಎಂದರೆ ಸರಿ. ನಾನು ಹಾಜರುಪಡಿಸಿರುವ ವಂಶವೃಕ್ಷ ದೇವಸ್ಥಾನದ ಹೆಸರಿನಲ್ಲಿ ದಾವಾ ಸ್ವತ್ತು ಇದೆ ಎಂದು ತೋರಿಸುವ ಸಲುವಾಗಿ ಹಾಕಿದ್ದೇನೆ. ನಮ್ಮ ಕುಟುಂಬದವರು ಬೀರೇದೇವರು ದೇವಸ್ಥಾನದಲ್ಲಿ ಪೂರ್ವದಿಂದ ಅರ್ಚಕರಾಗಿ ಪೂಜೆ ಮಾಡಿಕೊಂಡು ಬಂದಿರುತ್ತಾರೆ.

ಬೀರೇದೇವರು ದೇವಸ್ಥಾನದಲ್ಲಿ ಅರ್ಚಕನಾಗಿ ಪೂಜೆ ಮಾಡುವ ಸಲುವಾಗಿ ಸರ್ಕಾರದಿಂದ ಯಾವುದೇ ಅದೇಶ ನಮಗೆ ಆಗಿರುವುದಿಲ್ಲ. ಬೀರೇದೇವರು ದೇವಸ್ಥಾನ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದೆಯೋ ಅಥವಾ ಮುಜರಾಯಿ ಇಲಾಖೆಗೆ ಸೇರಿದೆಯೋ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಬೀರೇದೇವರು ದೇವಸ್ಥಾನಕ್ಕೆ ನನ್ನನ್ನು ಅರ್ಚಕನಾಗಿ ಹೆಬ್ಬಾಡಿಹುಂಡಿ ಗ್ರಾಮದ ಯಾಜಮಾನರುಗಳು ಮಾಡಿರುತ್ತಾರೆ.

ಬೀರೇದೇವರ ದೇವಸ್ಥಾನ ಹೆಬ್ಬಾಡಿಹುಂಡಿ ಗ್ರಾಮದ ಯಾಜಮಾನರುಗಳ ಮನೆದೇವರಾಗಿದ್ದು ಆ ಕಾರಣಕ್ಕೆ ನನ್ನನ್ನು ಸದರಿ ದೇವಸ್ಥಾನದ ಅರ್ಚಕನಾಗಿ ಮಾಡಿರುತ್ತಾರೆ. ಸದರಿ ದೇವಸ್ಥಾನಕ್ಕೆ ಅರ್ಚಕನಾಗಿ ಇರಬೇಕು ಎನ್ನುವ ಬಗ್ಗೆ ಹೆಬ್ಬಾಡಿಹುಂಡಿ ಗ್ರಾಮದ ಯಾಜಮಾನರುಗಳು ಲಿಖಿತವಾದ ದಾಖಲೆಗಳನ್ನು ಮಾಡಿಕೊಟ್ಟಿಲ್ಲ.

ಕರದ ದಾಖಲೆಯಲ್ಲಿ ಬೀರೇಶ್ವರ ದೇವಸ್ಥಾನ ಎಂದು ನಮೂದಾಗಿರುವ ಕಾರಣ ಸದರಿ ಆಸ್ತಿಯನ್ನು ನಾನು ಕ್ಲೆಮ್ ಮಾಡುತ್ತಿದ್ದೇನೆ ಎಂದರೆ ಸರಿ. ಸದರಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ 10 ಎಕರೆ 26 ಗುಂಟೆ ಜಮೀನು ಇರುತ್ತದೆ. ಸದರಿ ವಿಸ್ತೀರ್ಣದ

ಜಮೀನಿನ ಆರ್.ಟಿ.ಸಿ ಯಾರ ಯಾರ ಹೆಸರಿನಲ್ಲಿ ಬರುತ್ತಿದೆ ಎಂದು ತೋರಿಸುವ ಸಲುವಾಗಿ ಆರ್.ಟಿ.ಸಿ ದಾಖಲೆ ಹಾಜರುಪಡಿಸಿದ್ದೇನೆ. ಬೀರೇದೇವರ ದೇವಸ್ಥಾನದಲ್ಲಿ ನಾನು ವಾರಕೊಮ್ಮೆ ಪೂಜಾ ಕಾರ್ಯ ಮಾಡುತ್ತೇನೆ. ದಾವಾ ಸ್ವತ್ತು ಪ್ರತ್ಯೇಕವಾಗಿ ನಮ್ಮ ಕುಟುಂಬಕ್ಕೆ ಸೇರಿದಂತಹ ಆಸ್ತಿ ಅಲ್ಲ ಎಂದರೆ ಸಾಕ್ಷಿಯು ನಮ್ಮ ಕುಟುಂಬಕ್ಕೆ ಸೇರಿದಂತಹ ಆಸ್ತಿ ಎಂದು ನುಡಿಯುತ್ತಾರೆ. ದಾವಾಸ್ತಿ ನಮ್ಮ ಕುಟುಂಬದ ಚೆನ್ನಯ್ಯ ಕುಳ್ಳಯ್ಯ ಎನ್ನುವವರ ಹೆಸರಿನಲ್ಲಿರುವ ಕಾರಣ ಅದು ನಮ್ಮ ಕುಟುಂಬದ ಆಸ್ತಿಯಾಗಿರುತ್ತದೆ.

ದಾವಾ ಸ್ವತ್ತು ದೇವಸ್ಥಾನಕ್ಕೆ ಸೇರಿದ ಸಾರ್ವಜನಿಕ ಆಸ್ತಿ ಎಂದು ನಾನು ಕೇಳುತ್ತಿದ್ದೇನೆ. ನಾನು ಹಾಜರುಪಡಿಸಿರುವ ಆರ್.ಟಿ.ಸಿಯಲ್ಲಿ ವಿಶ್ವೇಶ್ವರ, ಮಹೇಶ್, ಪುಟ್ಟಸ್ವಾಮಿ, ನಾಗರಾಜು ಎನ್ನುವವರು ತೋಟ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿಯು ನಾನು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನಲ್ಲಿ 2 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ವ್ಯವಸಾಯ ಮಾಡುತ್ತೇನೆ.

ದಾವಾ ಸ್ವತ್ತಿನಲ್ಲಿ ತೇಗದ ಮರ, ಸಿಲ್ವರ್ ಮರ, ಓಕ್ ಮರ, ತೆಂಗಿನ ಮರ, ನೀಲಗಿರಿ ಮರಗಳನ್ನು ನಾನು ಬೆಳೆಸಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಪ್ರತಿವಾದಿ-2,3,7 ಹಾಗೂ 9 ರವರ ಹೆಸರಿನಲ್ಲಿ ನಮೂದಾಗಿರುವ ಆರ್.ಟಿ.ಸಿ ಗಳ ಎಂ.ಆರ್ ಅನ್ನು ನಾನು ರೆವಿನ್ಯೂ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ.

ಸರ್ಕಾರದಿಂದ ನಮ್ಮ ಕುಟುಂಬಕ್ಕೆ ದಸ್ತಕ್ ಹಣವನ್ನು ಕೊಡುತ್ತಿಲ್ಲ. 2 ನೇ ಪ್ರತಿವಾದಿ ಸ.ನಂ.17/1 ರಲ್ಲಿ 2 ಎಕರೆ, 3 ನೇ ಪ್ರತಿವಾದಿ ಸ.ನಂ.17 ರಲ್ಲಿ 1 ಎಕರೆ, 7 ನೇ ಪ್ರತಿವಾದಿ ಸ.ನಂ.17/2 ರಲ್ಲಿ 1 ಎಕರೆ 10 ಗುಂಟೆ ಹಾಗೂ 9 ನೇ ಪ್ರತಿವಾದಿ ಸ.ನಂ.17/3 ರಲ್ಲಿ 3 ಎಕರೆ 9 ಗುಂಟೆ ಜಮೀನಿನ ಸಂಪೂರ್ಣ ಮಾಲೀಕರಾಗಿದ್ದು ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸುಳ್ಳು. ಗುರುಸ್ವಾಮಿ ರವರು ಪುಟ್ಟಸ್ವಾಮಿ ರವರಿಗೆ ಕ್ರಯಪತ್ರದ ಮುಖೇನ 3 ಎಕರೆ 9 ಗುಂಟೆ ಸ್ವತ್ತನ್ನು ಸ.ನಂ.17/3 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿ-2,3,7 ಮತ್ತು 9 ರವರು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರೂ ಕೂಡ ಅವರಿಗೆ ತೊಂದರೆ ನೀಡುವ ಸಲುವಾಗಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ-2, 3, 7 ಮತ್ತು 9 ರವರು ಸ್ವಾಧೀನದಲ್ಲಿದ್ದಾರೆ ಮತ್ತು ಅವರಿಗೆ ದಾಖಲೆಗಳು ದಾವಾ ಸ್ವತ್ತಿನ ಸಂಬಂಧ ಆಗಿದೆ ಎಂದು ಸುಮಾರು 5 ವರ್ಷಗಳ ಹಿಂದೆ ಆಗಿದೆ ಎಂದು ಗೊತ್ತಾಯಿತು. ಪ್ರತಿವಾದಿ-2, 3, 7 ಮತ್ತು 9 ರವರಿಗೆ ಆಗಿರುವ ಕ್ರಯ ಪತ್ರಗಳನ್ನು ರದ್ದು

ಪಡಿಸಲು ಕೋರಿ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳು ದಾವಾ ಸ್ವತ್ತು ವೈಯಕ್ತಿಕವಾಗಿ ನನಗೆ ಸೇರಿದೆ ಅಥವಾ ಬೀರೆದೇವರ ದೇವಸ್ಥಾನಕ್ಕೆ ಸೇರಿರುವ ಸ್ವತ್ತು ಎಂದು ತೋರಿಸುವ ದಾಖಲೆಗಳು ಅಲ್ಲ ಎಂದರೆ ನನಗೆ ಗೊತ್ತಿಲ್ಲ. ದೇವಸ್ಥಾನಕ್ಕೆ ಸೇರಿದ ಸ್ವತ್ತು ಎಂದು ಹೇಳಿಕೊಂಡು ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.